ಶ್ರೀ ವಿನಯಕುಮಾರ್ ಸೊರಕೆ : ಈಗಾಗಲೇ ಆ ಪ್ರಕರಣ ನ್ಯಾಯಾಲಯದಲ್ಲಿದೆ. ಅದು ತೀರ್ಮಾನವಾದ ಕೂಡಲೇ ನಾವು ಅದನ್ನು ರದ್ದುಪಡಿಸುವ ಕೆಲಸಕಾರ್ಯಗಳನ್ನು ಮಾಡುತ್ತೇವೆ.

4) ವಿಷಯ: RTE ಬಗ್ಗೆ.

ಶ್ರೀ ಸಿ.ಟಿ. ರವಿ: (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, RTE quota ಅಡಿ ಕೇಂದ್ರ ಸರ್ಕಾರ 2009–10ರಲ್ಲಿ 25% ಸೀಟುಗಳನ್ನು ಖಾಸಗಿ ಶಾಲೆಗಳಲ್ಲೂ ಕೂಡ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವ ಯೋಜನೆ ಜಾರಿಗೆ ತಂದಿತು. ಅದನ್ನು ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಕರ್ನಾಟಕ. ಆದರೆ, ಅದರ ದುರುಪಯೋಗವಾಗುತ್ತಿದೆ. ಸುಳ್ಳು certificate ಗಳನ್ನು ಕೊಟ್ಟು ದುರುಪಯೋಗವಾಗುತ್ತಿದೆ.

ಅಧ್ಯಕ್ಷರು: ದುರುಪಯೋಗವಾಗುವುದನ್ನು ತಡೆಯುವುದು ಹೇಗೆ ಎಂದು ಹೇಳಿ.

ಶ್ರೀ ಸಿ.ಟಿ. ರವಿ: ಅದನ್ನು ತಡೆದು ರದ್ದುಪಡಿಸಿ ನಿಜವಾದ ಅರ್ಹರಿಗೆ ಕೊಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತದೆಯೇ?

ಶ್ರೀ ಟಿ.ಬಿ. ಜಯಚಂದ್ರ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು RTE quota ದ ಅಡಿ ಮೀಸಲಾತಿ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆದಿದ್ದಾರೆ. ಸರ್ಕಾರಕ್ಕೂ ಕೂಡ ಅದರ ಅರಿವಿದೆ. ಅದರ ಬಗ್ಗೆ ಸುದೀರ್ಘವಾದ ಉತ್ತರವನ್ನು ನಾಳೆ ಕೊಡಿಸುತ್ತೇವೆ. ಏಕೆಂದರೆ, ಮಾನ್ಯ ಸಚಿವರು Council ನಲ್ಲಿದ್ದಾರೆ.

5) **ವಿಷಯ:** 1987ನೇ ಇಸವಿಯಿಂದ 1994–95ನೇ ಸಾಲಿನ ಅನುದಾನರಹಿತ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: (ವಿರೋಧ ಪಕ್ಷದ ನಾಯಕರು): 1987ನೇ ಇಸವಿಯಿಂದ 1994–95ನೇ ಸಾಲಿನ ಅನುದಾನರಹಿತ ಶಾಲಾ ಕಾಲೇಜುಗಳಿಗೆ ಸರ್ಕಾರದ ಅನುದಾನವಿದ್ದರೂ ಮುಂದೆ ಬಂದ ಸರ್ಕಾರಗಳು ಇದರಲ್ಲಿ ಕೇವಲ 718 ಶಾಲಾ ಕಾಲೇಜುಗಳಿಗೆ ಮಾತ್ರ ಅನುದಾನ ಕೊಟ್ಟು 203 ಶಾಲಾ ಕಾಲೇಜುಗಳಿಗೆ ಅನುದಾನ ಕೊಟ್ಟಿಲ್ಲ. ಅದರ ಬಗ್ಗೆ ಪಾದಯಾತ್ರೆ ಮಾಡಿ ಸರ್ಕಾರದ ಗಮನ ಸೆಳೆದರು. ಅದರ ಕಡತ